# ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಸಣ್ಣಕೆರೆ

## ಯಶೋಗಾಥೆ

---

**ಶಾಲೆಯ ಹೆಸರು :** ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಸಣ್ಣಕೆರೆ

**ವಿಳಾಸ:** ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಸಣ್ಣಕೆರೆ, ಅಂಚೆ : ಗುಣವಂತೆ, ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.577 126

**ಮುಖ್ಯ ಶಿಕ್ಷಕರ ಹೆಸರು :** ಭಾರತಿ ಎ

**ಮುಖ್ಯ ಶಿಕ್ಷಕರ ದೂರವಾಣಿ :** 9480531141

9108131041

**ಮುಖ್ಯ ಶಿಕ್ಷಕರ ಇ - ಮೇಲ್ ವಿಳಾಸ :** bharathikoppa22@gmail.com

**ಶಾಲಾ ಇ ಮೇಲ್ ವಿಳಾಸ :** glpssannakerekoppa@gmail.com

---

**2 . ಶಾಲೆಯ ಭಾವಚಿತ್ರ ಮತ್ತು ವಿವರಣೆ:**




**ವಂದೇ ಭಾರತ್ ರೈಲು ಮಾದರಿ ಹೊರ ಗೋಡೆ ಚಿತ್ತಾರ**




## ವಂದೇ ಭಾರತ್ ರೈಲು ಮಾದರಿ ಹೊರ ಗೋಡೆ ಚಿತ್ತಾರ

ಶಾಲೆಯಲ್ಲಿ ಎರಡು ತರಗತಿ ಕೊಠಡಿಗಳು ಮತ್ತು ಒಂದು ಅಕ್ಷರ ದಾಸೋಹ ಕೊಠಡಿ ಇರುತ್ತದೆ.2018 ರಲ್ಲಿ ಶಾಲೆಗೆ ಹೊಸ ಮೆರುಗು ನೀಡಲು ಶಾಲಾ ಹೊರ ಗೋಡೆಗೆ ರೈಲು ಮಾದರಿ ಚಿತ್ತಾರ ಮಾಡಿಸಲಾಯಿತು.ರೈಲು ಸಂಚಾರವೇ ಇಲ್ಲದ ನಮ್ಮ ಮಲೆನಾಡಿನ ಮಕ್ಕಳಿಗೆ ರೈಲಿನ ಚಿತ್ತಾರ ವಿಶೇಷ ಆಕರ್ಷಣೆಯಾಗಿತ್ತು.ಬದಲಾದ ಕಾಲ ಘಟ್ಟಕ್ಕೆ ಅನುಗುಣವಾಗಿ 2024 ರಲ್ಲಿ ವಂದೇ ಭಾರತ್ ರೈಲು ಮಾದರಿಯಲ್ಲಿ ಶಾಲೆಯ ಹೊರ ಗೋಡೆಯ ಚಿತ್ತಾರ ಮಾಡಲಾಗಿದೆ.ಶಾಲಾ ಗೋಡೆ ಮಕ್ಕಳಿಗೆ ರೈಲಿನ ವಿಶೇಷ ಕಲ್ಪನೆ ಕೊಡುವಂತಿದೆ.

**3. ಶಾಲೆಯ ಪ್ರಾರಂಭ ಮತ್ತು ಸರ್ವತೋಮುಖ ಬೆಳವಣಿಗೆ:**



## ನಲಿಕಲಿ ತರಗತಿ

ಮಲೆನಾಡ ಗಾಂಧಿ ಎಂದೇ ಖ್ಯಾತರಾದ ಅಂದಿನ ಶಿಕ್ಷಣ ಸಚಿವರಾದ ಮಾನ್ಯ ಹೆಚ್.ಜಿ.ಗೋವಿಂದೇಗೌಡರಿಂದ 1998 ರಲ್ಲಿ ಶಾಲೆ ಉದ್ಘಾಟಿಸಲ್ಪಟ್ಟಿತು.ಹರಂದೂರು ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ, ಗೋವಿಂದೇಗೌಡರ ಮನೆಯಿಂದ ಕೂಗಳತೆ ದೂರದಲ್ಲಿ ಇರುವ ನಮ್ಮ ಕಿರಿಯ ಪ್ರಾಥಮಿಕ ಶಾಲೆಯು ಈ ಇಪ್ಪತ್ತೈದು ವರ್ಷಗಳ ಪಯಣದಲ್ಲಿ ಸಾಕಷ್ಟು ಸಾಧನೆಗಳನ್ನು

ಮುಡಿಗೇರಿಸಿಕೊಂಡಿದೆ.ಕೊಪ್ಪದ ಹರಂದೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಏಕೈಕ ಕಿರಿಯ ಪ್ರಾಥಮಿಕ ಶಾಲೆ ನಮ್ಮದಾಗಿದ್ದು,ಪ್ರಸ್ತುತ ಇಲ್ಲಿನ ಇತರ ಹಿರಿಯ ಪ್ರಾಥಮಿಕ ಶಾಲೆಗಳಿಗಿಂತ ನಮ್ಮ ಶಾಲೆಯ ಮಕ್ಕಳ ಸಂಖ್ಯೆ ಉತ್ತಮವಾಗಿದೆ.



ಲಯನ್ಸ್ ಕ್ಲಬ್ ,ಕೊಪ್ಪ ಇವರು ಕೊಡುಗೆ ನೀಡಿದ ಸುಸಜ್ಜಿತ ನಲಿಕಲಿ **rack**

ಯಾವುದೇ ಖಾಸಗಿ ಶಾಲೆಗೆ ಕಡಿಮೆ ಇಲ್ಲದಂತೆ ಪೀಠೋಪಕರಣಗಳ ವ್ಯವಸ್ಥೆ ಮಾಡಲಾಗಿದೆ.ನಲಿಕಲಿ ತರಗತಿಯಲ್ಲಿ ಮಕ್ಕಳು ಪುಟಾಣಿ ಕುರ್ಚಿಯಲ್ಲಿ ಕುಳಿತು ದುಂಡು ಮೇಜಿನ ಮೇಲೆ ಬರೆಯುವ ಮೂಲಕ ಕಲಿಕೆಗೆ ಹಿತಕರ ವಾತಾವರಣ ಕಲ್ಪಿಸಲಾಗಿದೆ. ನಲಿಕಲಿ ಕಾರ್ಡ್ ಗಳ ಜೋಡಣೆಗೆ ಉತ್ತಮ ಗುಣಮಟ್ಟದ ರ್ಯಾಕ್ ಇದೆ.ತರಗತಿ ಗೋಡೆಗೆ ಕಲಿಕಾ ಪೂರಕ ಪದಗಳನ್ನು ಒಳಗೊಂಡ ಗೋಡೆ ಚಿತ್ತಾರ ಮಾಡಿಸಿರುವುದರಿಂದ ಸಂತಸದಾಯಕ ಕಲಿಕೆಗೆ ಪ್ರೇರಣಾದಾಯಕವಾಗಿದೆ.ಪೀಠೋಪಕರಣಗಳ ವ್ಯವಸ್ಥೆಯಲ್ಲಿ ಜಿಲ್ಲಾ ಪಂಚಾಯತಿ ಅನುದಾನ,ಲಯನ್ಸ್ ಕ್ಲಬ್,ರೋಟರಿ ಕ್ಲಬ್, ಶಾಲಾ ಎಸ್.ಡಿ.ಎಂ.ಸಿ ಯ ಸಹಕಾರ ಬಹಳವಾಗಿದೆ.ಆಡಳಿತಾತ್ಮಕ ವಹಿಗಳ ಸುವ್ಯವಸ್ಥಿತ ಜೋಡಣೆಗೂ ಉತ್ತಮ ರ್ಯಾಕ್ ಮತ್ತು ಕಪಾಟುಗಳಿವೆ.

ಶಾಲೆಯ ತರಗತಿ ಕೊಠಡಿ,ಅಡುಗೆ ಕೋಣೆ ಮತ್ತು ಜಗಲಿಗೆ ಗುಣಮಟ್ಟದ ನೆಲಹಾಸು ಹಾಕಲಾಗಿದ್ದು,ಶಾಲೆಯ ಸ್ವಚ್ಛತೆ ಕಾಪಾಡಲು ಮತ್ತು ಅಂದವನ್ನು ಹೆಚ್ಚಿಸಲು ಸಹಕಾರಿಯಾಗಿದೆ.4-5 ನೇ ತರಗತಿ ಗೋಡೆಗಳ ಮೇಲೆ ಸ್ವಯಂ ಕಲಿಕೆಗೆ ಅನುಕೂಲವಾಗುವಂತಹ ಚಿತ್ರ ಸಹಿತ ಬರಹಗಳನ್ನು ಬರೆಯಲಾಗಿದ್ದು,ಮಕ್ಕಳ ಜ್ಞಾನದ ಅಭಿವ್ಯಕ್ತಿಗೆ ವಿಶೇಷ ಅವಕಾಶ ನೀಡಲಾಗುತ್ತಿದೆ.

**4.** ವಿದ್ಯಾರ್ಥಿಗಳ ಕಲಿಕಾ ಪ್ರಗತಿ:

ಚಿಕ್ಕ ಮಕ್ಕಳು ಹಸಿ ಮಣ್ಣಿನ ಮುದ್ದೆಯಂತೆ.ಅವರನ್ನು ಯಾವ ಆಕಾರಕ್ಕೆ ಬೇಕಿದ್ದರೂ ತಿದ್ದಿ ತೀಡಬಹುದು ಎಂಬ ಬಲ್ಲವರ ಮಾತಿನಂತೆ ಕಿರಿಯ ಪ್ರಾಥಮಿಕ ಹಂತದ ಮಕ್ಕಳಿಗೆ ಸಾಕಷ್ಟು ಕಲಿಕಾ ಪೂರಕ ವಾತಾವರಣ ಕಲ್ಪಿಸಲಾಗುತ್ತಿದೆ.5 ನೇ ತರಗತಿಯ ಮೌಲ್ಯಾಂಕನ ಪರೀಕ್ಷೆಯಲ್ಲಿ ಮಕ್ಕಳು ಉತ್ತಮ ಸಾಧನೆ ತೋರಿದ್ದಾರೆ.




ಮಕ್ಕಳ ಸಾಮಾನ್ಯ ಜ್ಞಾನದ ಅಭಿವ್ಯಕ್ತಿಗೆ ವಿಶೇಷ ಗಮನ ನೀಡಲಾಗುತ್ತಿದೆ.ಶಾಲಾ ಮಕ್ಕಳು ಭಾರತದ ಎಲ್ಲಾ ರಾಜ್ಯ ಮತ್ತು ರಾಜಧಾನಿಯ ಹೆಸರು,ಕರ್ನಾಟಕದ ಎಲ್ಲಾ ಜಿಲ್ಲೆಗಳ ಹೆಸರು,ಸುಮಾರು 40 ಕ್ಕೂ ಹೆಚ್ಚು ಗಾದೆ ಮಾತುಗಳು,ಪರಿಸರ ಸುಭಾಷಿತಗಳನ್ನು ಹೇಳಬಲ್ಲವರಾಗಿದ್ದಾರೆ.ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಉತ್ತಮವಾಗಿ ಕಥೆ ಹೇಳುವ ಮೂಲಕ ಮೌಖಿಕ ಕಲಿಕೆಯ ಅನಾವರಣವಾಗುತ್ತಿದೆ.ರಾಜ್ಯ ಮಟ್ಟದ ವೇದಿಕೆಯಲ್ಲಿ ಹಾಗೂ ಎಫ್ ಎಂ ರೇಡಿಯೋದಲ್ಲಿ ಕೂಡ ಆಯ್ದ ಮಕ್ಕಳು ಕಥೆ ಹೇಳಿದ್ದಾರೆ.



ಕನ್ನಡಪ್ರಭ

## ಜಿಲ್ಲಾ ಅಸಾಧಾರಣ ಪ್ರತಿಭೆ ಪ್ರಶಸ್ತಿಗೆ ಅಕ್ಷರಶೆಟ್ಟಿ ಆಯ್ಕೆ

**ಕೊಪ್ಪ:** ಪಟ್ಟಣದ ಹೊರವಲಯದ ಸ.ಕಿ.ಪ್ರಾ.ಶಾಲೆ, ಸಣ್ಣಕೆರೆ ವಿದ್ಯಾರ್ಥಿನಿ ಕುಮಾರಿ ಅಕ್ಷರ. ಎಸ್.ಶೆಟ್ಟಿ ಚಿಕ್ಕಮಗಳೂರು ಜಿಲ್ಲಾ ಅಸಾಧಾರಣ ಪ್ರತಿಭೆ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ 2023-24 ನೇ ಸಾಲಿನಲ್ಲಿ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿ ಯೋಜನೆಯಡಿ ಅಸಾಧಾರಣ ಪ್ರತಿಭೆಯುಳ್ಳ ಮಕ್ಕಳಿಗೆ ನೀಡುವ ಈ ಪ್ರಶಸ್ತಿ ₹10000 ನಗದು ಪುರಸ್ಕಾರ ಒಳಗೊಂಡಿದೆ. ಪ್ರಸ್ತುತ ಸಣ್ಣಕೆರೆ ಶಾಲೆ 3 ನೇ ತರಗತಿ ವಿದ್ಯಾರ್ಥಿನಿಯಾಗಿರುವ ಅಕ್ಷರ ಈಗಾಗಲೇ ರಾಜ್ಯ ಮಟ್ಟದ ಮಕ್ಕಳ ಸಾಹಿತ್ಯ ಸಮ್ಮೇಳನದ ಕಥಾ ಗೋಷ್ಠಿ, ರಾಜ್ಯ ಮಕ್ಕಳ ಸಾಹಿತ್ಯ ಕಮ್ಮಟಗಳಲ್ಲಿ ಭಾಗವಹಿಸಿ ಪುರಸ್ಕಾರ ಪಡೆದಿದ್ದಾರೆ. ಸಾಹಿತ್ಯ , ಭಾಷಣ, ನೃತ್ಯ ಕಲೆಯಲ್ಲಿ ಪ್ರತಿಭೆ ಮೆರೆದಿರುವ ಇವರು ಅನೇಕ ಜಿಲ್ಲಾ ಮತ್ತು ತಾಲೂಕು ಮಟ್ಟದ ಬಹುಮಾನಗಳನ್ನು ಪಡೆದಿದ್ದಾರೆ. ಸಣ್ಣಕೆರೆ ವಾಸಿ ಮೈಥಾ ಮತ್ತು ಶಬರೀಶ ಶೆಟ್ಟಿ ಪುತ್ರಿ ಯಾದ ಇವರ ಸಾಧನೆಗೆ ಶಾಲಾ ಎಸ್‌ಡಿಎಂಸಿ ವೃಂದ ಮತ್ತು ಶಿಕ್ಷಕ ವೃಂದದವರು ಅಭಿನಂದನೆ ಸಲ್ಲಿಸಿದ್ದಾರೆ.

CHIKKAMAGALURU Edition
Jan 19, 2024 Page No. 01

ಈ ಎಲ್ಲದರ ಫಲಿತ ಎಂಬಂತೆ ಈ ವರೆಗೆ ಶಾಲೆಯ ಮೂವರು ವಿದ್ಯಾರ್ಥಿನಿಯರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ಚಿಕ್ಕಮಗಳೂರು ಜಿಲ್ಲಾ ಸಾಂಸ್ಕೃತಿಕ ಕ್ಷೇತ್ರದ ಅಸಾಧಾರಣ ಪ್ರತಿಭೆ ಪ್ರಶಸ್ತಿಯನ್ನು ತಲಾ ₹ 10000 ನಗದಿನೊಂದಿಗೆ ಪಡೆದಿದ್ದಾರೆ.(2019,2021ಮತ್ತು 2023 ರಲ್ಲಿ)

**5. ಮಕ್ಕಳಲ್ಲಿ ಬುನಾದಿ ಸಾಮರ್ಥ್ಯ ಹೆಚ್ಚಿಸಲು ಹಾಗೂ ಕಲಿಕಾ ಬೋಧನಾ ಚಟುವಟಿಕೆಯಲ್ಲಿ ಹಮ್ಮಿಕೊಂಡ ನಾವೀನ್ಯಯುತ ಚಟುವಟಿಕೆಗಳು:**



## ತಂತ್ರಜ್ಞಾನದ ಮೂಲಕ ಕಲಿಕೆ

ಮಕ್ಕಳಿಗೆ ಆಟಿಕೆಗಳ ಜೋಡಣೆ ,ಎಣಿಕೆಯಂತಹ ಚಟುವಟಿಕೆ ನಡೆಸುವ ಮೂಲಕ ಬುನಾದಿ ಅಕ್ಷರ ಮತ್ತು ಸಂಖ್ಯಾ ಜ್ಞಾನ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.ಅಕ್ಷರ ಚಿತ್ರಗಳು ಮತ್ತು ಕ್ರಾಫ್ಟ್ ಗಳನ್ನು ಮಾಡಿಸುವ ಮೂಲಕ ಬುನಾದಿ ಸಾಮರ್ಥ್ಯ ವೃದ್ಧಿಗೆ ಪ್ರೇರೇಪಿಸಲಾಗುತ್ತಿದೆ.

ತಂತ್ರಜ್ಞಾನದತ್ತ ನಾಗಾಲೋಟದಲ್ಲಿ ಸಾಗುತ್ತಿರುವ ಇಂದಿನ ಯುಗದಲ್ಲಿ ಗ್ರಾಮೀಣ ಭಾಗದ ಮಕ್ಕಳಿಗೆ ತಂತ್ರಜ್ಞಾನ ಆಧಾರಿತ ಕಲಿಕೆಗೆ ಅವಕಾಶ ನೀಡಲಾಗುತ್ತಿದೆ. ಸ್ಮಾರ್ಟ್ ಕ್ಲಾಸ್ ಮೂಲಕ ಪಠ್ಯ ಮತ್ತು ಸಹ ಪಠ್ಯ ಚಟುವಟಿಕೆಗಳನ್ನು ಕಲಿಸಲಾಗುತ್ತಿದೆ.ಲ್ಯಾಪ್ ಟಾಪ್ ಮೂಲಕ ಪಠ್ಯಕ್ಕೆ ಪೂರಕ ಕಲಿಕೆಗೆ ಒತ್ತು ನೀಡಲಾಗುತ್ತಿದೆ.

**6. ಶಾಲೆಯ ಭೌತಿಕ ಪರಿಸರ,ಶಾಲಾ ಮೈದಾನ,ಕುಡಿಯುವ ನೀರು,ಶೌಚಾಲಯ ಇನ್ನಿತರ ಸೌಲಭ್ಯಗಳು:**




## ಶಾಲಾ ಕೈತೋಟ

ಮಲೆನಾಡಿನ ಮಡಿಲಲ್ಲಿ ನಿಸರ್ಗದ ರಮಣೀಯತೆಯಲ್ಲಿ ನಮ್ಮ ಶಾಲೆ ಇದೆ.ಈ ಪ್ರಕೃತಿ ಸೌಂದರ್ಯಕ್ಕೆ ಮತ್ತಷ್ಟು ಇಂಬು ನೀಡುವಂತೆ ಶಾಲಾ ಕೈತೋಟ ಇದೆ.ಸುಮಾರು 20 ಗುಲಾಬಿ ಗಿಡಗಳು,ತರತರದ ಬಣ್ಣದ ಗಿಡಗಳನ್ನು ಹೊಂದಿರುವ ಶಾಲಾ ಕೈತೋಟ ಬಣ್ಣ ಬಣ್ಣದ ಹೂಗಳಿಂದ ಮಕ್ಕಳ ಮನಸ್ಸನ್ನು ಅರಳಿಸುತ್ತಿವೆ.ಕೈತೋಟದ ನಡುವೆ ಒಂದು ಪುಟ್ಟ ಕೊಳವಿದ್ದು,ಬಣ್ಣ ಬಣ್ಣದ ತಾವರೆ ಹೂಗಳು ಕೊಳದಲ್ಲಿ ಕಣ್ಮನ ತಣಿಸುತ್ತಿವೆ.ಗಿಡಗಳಿಗೆ ನೀರುಣಿಸಲು ಸ್ಪ್ರಿಂಕ್ಲರ್ ವ್ಯವಸ್ಥೆ ಇದೆ.ಪ್ರತಿ ಮಗುವಿಗೂ ಕೈ ತೋಟದ ಗಿಡಗಳ ಆರೈಕೆಯ ಜವಾಬ್ದಾರಿಯನ್ನು ಹಂಚಿಕೆ ಮಾಡಲಾಗಿದ್ದು,ಇದರಿಂದ ಮಕ್ಕಳಿಗೆ ಪ್ರಾಯೋಗಿಕ ಕಲಿಕೆಗೆ ಸಹಾಯಕವಾಗಿದೆ.




## ಪೈಪ್ ಕಾಂಪೋಸ್ಟ್ ಘಟಕ - ಹಸಿ ಕಸದ ನಿರ್ವಹಣೆ

ಕೈತೋಟದ ನಡುವೆ ಒಂದು ಪೈಪ್ ಕಾಂಪೋಸ್ಟ್ ಘಟಕ ನಿರ್ಮಿಸಿಕೊಂಡು ಹಸಿ ಕಸವನ್ನು ಹಾಕಿ ಕಾಂಪೋಸ್ಟ್ ಗೊಬ್ಬರ ತಯಾರಿಸಿ ಗಿಡಗಳಿಗೆ ಬಳಸಲಾಗುತ್ತಿದೆ.ಇದರಿಂದ ಹಸಿ ಕಸದ ಸಮರ್ಪಕ ನಿರ್ವಹಣೆ ಮತ್ತು ಗೊಬ್ಬರ ತಯಾರಿಕೆಯ ಪ್ರಾಯೋಗಿಕ ಕಲಿಕೆ ಮಕ್ಕಳಿಗೆ ದೊರೆಯುತ್ತಿದೆ.

ಕಿರಿಯ ಪ್ರಾಥಮಿಕ ಹಂತದ ಮಕ್ಕಳಿಗೆ ಅನುಕೂಲ ಆಗುವ ವಿಶಾಲ ಆಟದ ಮೈದಾನವಿದೆ.ಜಾರುಬಂಡಿ,ಜೋಕಾಲಿ,ಸೀ - ಸಾ ಆಟದ ಪರಿಕರಗಳು ಮಕ್ಕಳಿಗೆ ಮುದ ನೀಡುತ್ತಿವೆ.ಶಾಲೆಯ ಮುಂಭಾಗದಲ್ಲಿ ಪ್ರಾರ್ಥನಾ ಸ್ಥಳದ ನೆಲಕ್ಕೆ ಇಂಟರ್ ಲಾಕ್ ಕಲ್ಲುಹಾಸು ಹಾಕಲಾಗಿದ್ದು,ಮಲೆನಾಡಿನ ಮಳೆಗಾಲದ ಅತಿವೃಷ್ಟಿಯಲ್ಲೂ ಮಕ್ಕಳ ಕೈ ಕಾಲು ಕೆಸರಾಗದಂತೆ ಸ್ವಚ್ಛತೆಗೆ ಸಹಕಾರಿಯಾಗಿದೆ.




## ಸುಸಜ್ಜಿತ ಶೌಚಾಲಯ

ಶಾಲೆಯಲ್ಲಿ ಒಟ್ಟು 3000 ಲೀ ನೀರು ಸಂಗ್ರಹಿಸುವಷ್ಟು ಸಿಂಟೆಕ್ಸ್ ವ್ಯವಸ್ಥೆ ಇದೆ.ಇದರಿಂದಾಗಿ ಶೌಚಾಲಯ ಮತ್ತು ಅಕ್ಷರ ದಾಸೋಹಕ್ಕೆ ನೀರಿನ ಅಭಾವವಿಲ್ಲ.ಮಕ್ಕಳಿಗೆ ಕುಡಿಯುವ ನೀರಿಗಾಗಿ ಆಕ್ವಾ ವಾಟರ್ ಫಿಲ್ಟರ್ ಇದೆ.ದಾನಿಗಳ ಸಹಕಾರದಿಂದ ಪ್ರತಿ ವಿದ್ಯಾರ್ಥಿಗೂ ಸ್ಟೀಲ್ ವಾಟರ್ ಬಾಟಲ್ ನೀಡಲಾಗಿದೆ.ನೀರಿನ ಬಾಟಲಿಗಳನ್ನು ಸುವ್ಯವಸ್ಥಿತವಾಗಿ ಸ್ಟೀಲ್ ರ್ಯಾಕ್ ನಲ್ಲಿ ತರಗತಿಯ ಒಂದು ಭಾಗದಲ್ಲಿ ಜೋಡಿಸಿಡಲಾಗಿದೆ.

ಬಾಲಕರು ಮತ್ತು ಬಾಲಕಿಯರಿಗೆ ಪ್ರತ್ಯೇಕ ಹೈಟೆಕ್ ಶೌಚಾಲಯ ಇದೆ.ಪ್ರತಿ ಯುರಿನಲ್ ಗಳಿಗೂ ಪ್ರತ್ಯೇಕ ನಲ್ಲಿಗಳು,ಬಕೆಟ್ ಇಡುವ ಮೂಲಕ ಮಕ್ಕಳಿಗೆ ನೀರಿನ ಸಮರ್ಪಕ ಬಳಕೆ ಮತ್ತು ಶೌಚಾಲಯ ಸ್ವಚ್ಛವಾಗಿಡುವ ಬಳಕೆಯ ಅಭ್ಯಾಸ ರೂಢಿಸಲಾಗುತ್ತಿದೆ.

ಕೈ ತೊಳೆಯಲು ಬೇಸಿನ್ ಸಹಿತ 5 ಹ್ಯಾಂಡ್ ವಾಶ್ ಗಳು,ಬೇಸಿನ್ ರಹಿತ 5 ನಲ್ಲಿಗಳು ಪ್ರತ್ಯೇಕವಾಗಿವೆ.ಇದರಿಂದ ಅಕ್ಷರ ದಾಸೋಹದ ಕೈ ತೊಳೆಯುವ ಮತ್ತು ತಟ್ಟೆಗಳನ್ನು ತೊಳೆಯುವ ಕೆಲಸ ಸುಗಮವಾಗಿ ಸಾಗುತ್ತಿದೆ.

## 7. ನಾವೀನ್ಯಯುತವಾಗಿ ತರಗತಿ ಪ್ರಕ್ರಿಯೆಯಲ್ಲಿ ಅಳವಡಿಸಿಕೊಂಡಿರುವ ಉಪಕ್ರಮಗಳು:




## ನಿಸರ್ಗದ ಮಡಿಲಲ್ಲಿ ಮಕ್ಕಳಿಗೆ ಸಾಹಿತ್ಯ ಬರವಣಿಗೆಯ ಕಾರ್ಯಾಗಾರ




ಪ್ರಾಥಮಿಕ ಶಾಲಾ ಹಂತದಲ್ಲಿ ಭಾಷಾ ಕೌಶಲಗಳು ಮಕ್ಕಳಿಗೆ ಕರಗತವಾಗಬೇಕು.ಆ ನಿಟ್ಟಿನಲ್ಲಿ ಕನ್ನಡ ಭಾಷಾ ಕೌಶಲಗಳನ್ನು ಬೆಳೆಸಲು "ಶಿಕ್ಷಣದೊಂದಿಗೆ ಸಾಹಿತ್ಯ " ಎಂಬ ಯೋಜನೆಯನ್ನು ಎರಡು ವರ್ಷಗಳ ಕಾಲ ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್, ಬೆಂಗಳೂರು ಇವರ ಸಹಕಾರದಿಂದ 2019 ರಿಂದ 2021 ತನಕ ನಿರಂತರವಾಗಿ ಮಾಡಲಾಯಿತು.ಯೋಜನೆಯ ಅವಧಿಯಲ್ಲಿ ಪ್ರತಿ ಶನಿವಾರ ಮತ್ತು ಭಾನುವಾರ ಶಿಕ್ಷಕರಾದ ಭಾರತಿ.ಎ ರವರು ಮಕ್ಕಳಿಗೆ ಸಾಹಿತ್ಯದ ಕಾರ್ಯಾಗಾರಗಳನ್ನು ಮಾಡುತ್ತಿದ್ದರು.ಮಕ್ಕಳಿಗೆ ಒಂದು ವಿಷಯ ದ ಮೇಲೆ ಚರ್ಚೆಗೆ ಅವಕಾಶ ನೀಡಿ,ನಂತರ ಅವರ ಆಸಕ್ತಿಗನುಗುಣವಾಗಿ ಚುಟುಕ, ಕವನ,ಕಥೆ,ಲೇಖನ ಬರೆಯಲು ಪ್ರೇರೇಪಿಸಲಾಗುತ್ತಿತ್ತು.ಬರಹಗಳ ವಾಚನ ಮಾಡಿಸಿ ವಾಚನ ಕೌಶಲ ಬೆಳೆಸಲಾಗುತ್ತಿತ್ತು.ನಂತರ ಅವರ ಕೈಬರಹದ ಲೇಖನದ ಪ್ರತಿಯನ್ನು ಸ್ಕ್ಯಾನ್ ಮಾಡಿಸಿ ಬ್ಯಾನರ್ ನ್ನು ಮಾಡಿ ಗ್ರಾಮ ಪಂಚಾಯತಿ ಹರಂದೂರು ಮುಂಭಾಗದಲ್ಲಿ ಮತ್ತು ಕ್ಷೇತ್ರ ಸಂಪನ್ಮೂಲ ಕೇಂದ್ರ, ಕೊಪ್ಪ ಮುಂಭಾಗದಲ್ಲಿ ಪ್ರದರ್ಶನ ಫಲಕದಲ್ಲಿ ಹಾಕುವ ಮೂಲಕ ಓದುಗರಿಗೆ ತಲುಪಿಸಲಾಗುತ್ತಿತ್ತು.ಮಕ್ಕಳ ಬರಹಗಳ ಸಂಪಾದಿತ ಕೃತಿ "ತೋಚಿದ್ದು...ಗೀಚಿದ್ದು" ಹೊರತರಲಾಗಿದೆ.




ಈ ಎರಡು ವರ್ಷಗಳು ನಿರಂತರ ಸಾಹಿತ್ಯದ ಯೋಜನೆ ಕೈಗೊಂಡ ನಂತರ ಈಗ ಶಾಲೆಯಲ್ಲಿ ವಾರದಲ್ಲಿ ಒಂದು ಅವಧಿ ಮಕ್ಕಳಿಗೆ ಬರವಣಿಗೆಗೆ ಪ್ರೇರೇಪಿಸಲಾಗುತ್ತಿದೆ.ಮಕ್ಕಳ ಬರಹಗಳನ್ನು ದಿನಪತ್ರಿಕೆಯ ಪುಟಾಣಿ ಪುರವಣಿಗೆ ಕಳಿಸಲಾಗುತ್ತದೆ. ಪ್ರಕಟಗೊಂಡ ಬರಹಗಳನ್ನು ಶಾಲಾ ಪ್ರದರ್ಶನ ಫಲಕದಲ್ಲಿ ಹಾಕುವ ಮೂಲಕ ಮಕ್ಕಳನ್ನು ಪ್ರೋತ್ಸಾಹಿಸಲಾಗುತ್ತಿದೆ.ಶಾಲೆಯಲ್ಲಿ ಮಕಳ ಕವಿ ಗೋಷ್ಠಿ, ಕಥಾ ಗೋಷ್ಠಿ ನಡೆಸಲಾಗುತ್ತದೆ.




ಈ ಎಲ್ಲದರ ಫಲಿತ ಎಂಬಂತೆ ನಮ್ಮ ಶಾಲೆಯ ನಾಲ್ಕು ವಿದ್ಯಾರ್ಥಿನಿಯರು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಶ್ರೀ ಕ್ಷೇತ್ರ ಆದಿಚುಂಚನಗಿರಿಯಲ್ಲಿ ನಡೆದ ರಾಜ್ಯ ಮಟ್ಟದ ಮಕ್ಕಳ ಸಾಹಿತ್ಯ ಸಮ್ಮೇಳನದ ಗೋಷ್ಠಿಯಲ್ಲಿ ಭಾಗವಹಿಸಿದ್ದಾರೆ (2020 ಜನವರಿ ಮತ್ತು 2023 ಜನವರಿ). ಶಾಲೆಯ ಒಬ್ಬಳು ವಿದ್ಯಾರ್ಥಿನಿ ಧಾರವಾಡದಲ್ಲಿ ನಡೆದ ಮಕ್ಕಳ ಸಾಹಿತ್ಯ ಸಮ್ಮೇಳನದ ವಿಶೇಷ ಅತಿಥಿಯಾಗಿ ಆಹ್ವಾನಿತಳಾಗಿದ್ದಾಳೆ. ನರಸಿಂಹರಾಜಪುರ ತಾಲ್ಲೂಕಿನ ಪ್ರಥಮ ಮಕ್ಕಳ ಸಾಹಿತ್ಯ ಸಮ್ಮೇಳನದ ವಿಶೇಷ ಅತಿಥಿಯಾಗಿ ಒಬ್ಬಳು ವಿದ್ಯಾರ್ಥಿನಿ ಭಾಷಣ ಮತ್ತು ಕವಿಗೋಷ್ಠಿಯಲ್ಲಿ ನಾಲ್ಕು ವಿದ್ಯಾರ್ಥಿನಿಯರು ಕವನ ವಾಚನ ಮಾಡಿದ್ದಾರೆ. ವಿಶ್ವ ಮಾನವ ದಿನಾಚರಣೆಯಂದು ಕುಪ್ಪಳಿಯ ಕವಿ ಸಮಾಧಿಯ ಮುಂದೆ ಕವನ ವಾಚನ ಮಾಡಿದ್ದಾರೆ. ಅದಲ್ಲದೇ ಶೃಂಗೇರಿಯಲ್ಲಿ ನಡೆದ ರಾಜ್ಯ ಮಟ್ಟದ ಮಕ್ಕಳ ಸಾಹಿತ್ಯ ಕಮ್ಮಟದಲ್ಲಿ 18 ವರ್ಷದ ಒಳಗಿನ ಮಕ್ಕಳ ಜೊತೆಗೆ ಭಾಗವಹಿಸಿ ಕಿರಿಯ ಪ್ರಾಥಮಿಕ ಹಂತದ ಮಕ್ಕಳಾದರೂ ತಮ್ಮದೇ ಆದ ಛಾಪು ಮೂಡಿಸಿದ್ದಾರೆ.


ಮುದ್ದಿನ ಗೊಂಬೆ

ಕವನ

ನನ್ನಯ ಮುದ್ದಿನ ಗೊಂಬೆ
ಕಣ್ಣನು ಮಿಟುಕಿಸಿ ಏನೆಂಬೆ?
ನನಗೂ ನಿನಗೂ ಸ್ನೇಹ
ಸದಾ ಆಡುವ ಮೋಹ

ಚಪ್ಪಾಳೆ ತಟ್ಟಿ ಆಡುತ್ತಾ
ಕೈ ಕೈ ಹಿಡಿದು ಕುಣಿಯುತ್ತಾ
ಗೊಂಬೆಯ ಜೊತೆಗಿನ ಆಟ
ಮರೆಸುವುದು ಶಾಲೆಯ ಪಾಠ

ಕೀಲಿ ಕೊಟ್ಟರೆ ಕುಣಿಯುವ
ಪೋಂ ಪೋಂ ರಾಗ ಹಾಡುವ
ಗೊಂಬೆಯ ಆಟವು ಚಂದ
ಮನಕೆ ಸದಾ ಆನಂದ

ನನ್ನಯ ಮುದ್ದಿನ ಗೆಳತಿ
ಗೊಂಬೆಯ ಮೇಲಿದೆ ಪ್ರೀತಿ
ನನಗೂ ಗೊಂಬೆಗೂ ಅನುಬಂಧ

ಬಿಡಿಸಲಾಗದ
ಸ್ನೇಹ ಸಂಬಂಧ

ಗೊಂಬೆಯ ಜೊತೆಗೆ ಆಡುವೆ
ರಜೆಯಲಿ ಕಾಲ ಕಳೆಯುವೆ
ನಮ್ಮಯ
ಒಲವಿನ
ಒಡನಾಟ
ಎಂದೆಂದಿಗೂ
ಮರೆಯದ
ಕೂಟ

■ಸನ್ನಿಧಿ
| ೬ನೇ ತರಗತಿ, ಸ.ಕಿ.ಪ್ರಾ.ಶಾಲೆ,
ಸಣ್ಣಕೆರೆ, ಕೊಪ್ಪ, ಚಿಕ್ಕಮಗಳೂರು

**8.** ವಿಶೇಷ ಚಟುವಟಿಕೆಗಳು ಮತ್ತು ಅನುದಾನ:



# ರೀಡಿಂಗ್ ಕಾರ್ನರ್ ನಲ್ಲಿ ವಾಚನ

ಶಾಲೆಯ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಹಲವಾರು ದಾನಿಗಳು ,ಸಂಘ ಸಂಸ್ಥೆಯವರು ಕೈ ಜೋಡಿಸಿದ್ದಾರೆ.ಸೌಜನ್ಯ ಸೇವಾಶ್ರಮ ಬೆಂಗಳೂರು, ನಗು ಫೌಂಡೇಶನ್ ಬೆಂಗಳೂರು, ಎಂ.ಆರ್.ಪಿ.ಎಲ್ ಮಂಗಳೂರು, ಅಮ್ಮ ಫೌಂಡೇಷನ್ ತುಮಖಾನೆ,ಲಯನ್ಸ್ ಕ್ಲಬ್ ಕೊಪ್ಪ, ರೋಟರಿ ಕ್ಲಬ್ ಕೊಪ್ಪ, ಜೆಸಿಐ ಕೊಪ್ಪ,ಶ್ರೀ ಹೆಚ್.ಜಿ.ಗೋವಿಂದೇಗೌಡ ಪ್ರತಿಷ್ಠಾನ,ಸಮರ್ಪಣಾ ಟ್ರಸ್ಟ್,ಸುಂದರ ಭಾರತ ಪ್ರತಿಷ್ಠಾನ, ಇನ್ನಿತರ ಸಂಸ್ಥೆಗಳು ಸಾಕಷ್ಟು ಸಹಕಾರ ನೀಡಿವೆ.ಇದಲ್ಲದೆ ಶಿಕ್ಷಣ ಇಲಾಖೆಯ ಅನುದಾನ,ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮ ಪಂಚಾಯತ್ ಅನುದಾನಗಳು ಶಾಲೆಯ ಅಭಿವೃದ್ಧಿಗೆ ಸಹಕಾರಿಯಾಗಿವೆ.



ದಾನಿಗಳು ನೀಡಿದ ಸಮವಸ್ತ್ರ ಧರಿಸಿದ ಮಕ್ಕಳು- ಪ್ರಾರ್ಥನಾ ಸಭೆ

ಶಾಲೆಯಲ್ಲಿ ಸುಸಜ್ಜಿತ ಶೌಚಾಲಯ, ಕೈತೋಟ, ಗ್ರಂಥಾಲಯ ಪುಸ್ತಕಗಳು,ರೀಡಿಂಗ್ ಕಾರ್ನರ್,ಪೀಠೋಪಕರಣಗಳು, ಗೋಡೆ ಚಿತ್ತಾರ,ಶಾಲಾ ಗೇಟ್ ಎಲ್ಲದರಲ್ಲೂ ದಾನಿಗಳ ಕೊಡುಗೆ ಅಪಾರ.ದಾನಿಗಳ ಸಹಕಾರದಿಂದ ಪ್ರತಿವರ್ಷ ಶಾಲಾ ಮಕ್ಕಳಿಗೆ ನೋಟ್ ಬುಕ್ ಗಳು,ಕಲಿಕಾ ಪೂರಕ ಸಾಮಗ್ರಿಗಳು,ರೈನ್ ಕೋಟ್,ಸ್ವೆಟರ್,ಸರ್ಕಾರಿ ಸಮವಸ್ತ್ರದ ಜೊತೆಗೆ ಇತರ ಮೂರು ಜೊತೆ ಸಮವಸ್ತ್ರ ಇತ್ಯಾದಿಗಳನ್ನು ನೀಡಲಾಗುತ್ತದೆ.



## ಭತ್ತದ ಗದ್ದೆಗೆ ಭೇಟಿ - ಅನುಭವದ ಕಲಿಕೆ

ಮಕ್ಕಳ ಕಲಿಕೆಯನ್ನು ಅನುಭವಾತ್ಮಕವಾಗಿಸಲು ಕೃಷಿ ಚಟುವಟಿಕೆ ವೀಕ್ಷಣೆಗಾಗಿ ಭತ್ತದ ಗದ್ದೆ ನಾಟಿಯಲ್ಲಿ ಭಾಗವಹಿಸುವುದು,ವಾಣಿಜ್ಯ ಬೆಳೆಗಳ ವೀಕ್ಷಣೆ,ಜೇನು ಸಂಸ್ಕರಣಾ ಕೇಂದ್ರಕ್ಕೆ ಭೇಟಿ, ಪೊಲೀಸ್ ಠಾಣೆ ಭೇಟಿ, ಡಿಜಿಟಲ್ ಗ್ರಂಥಾಲಯ ಭೇಟಿಯಂತಹ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಮಕ್ಕಳ ಸ್ನೇಹ ನಿಧಿ ಎಂಬುದಾಗಿ ಮಕ್ಕಳ ಉಳಿತಾಯದ ಹಣ ಸಂಗ್ರಹ ಮಾಡಿ ಮಕ್ಕಳ ಬ್ಯಾಂಕ್ ರೂಪದಲ್ಲಿ ಹಣದ ನಿರ್ವಹಣೆ ಮಾಡಿ ಆರ್ಥಿಕವಾಗಿ ಸಂಕಷ್ಟದಲ್ಲಿರುವ ಮಕ್ಕಳ ಅನಾರೋಗ್ಯ ಅಥವಾ ಇನ್ನಿತರ ಶಾಲಾ ಸಂಬಂಧಿತ ಮಕ್ಕಳ ಅಗತ್ಯತೆಗೆ ಸ್ನೇಹ ನಿಧಿಯ ಹಣವನ್ನು ನೀಡಲಾಗುತ್ತದೆ.ಮಕ್ಕಳಿಗೆ ಪರಸ್ಪರ ಸಹಕಾರ,ಉಳಿತಾಯದ ಹಣದ ಸದುಪಯೋಗದ ಅಭ್ಯಾಸ ಬೆಳೆಸಲು ಈ ಯೋಜನೆ ಸಹಾಯಕವಾಗಿದೆ.

ಚಿಕ್ಕಮಗಳೂರು ಜಿಲ್ಲಾ ಪಂಚಾಯತ್ ಕಾರ್ಯ ನಿರ್ವಹಣಾ ಅಧಿಕಾರಿಗಳಾದ ಜಿ.ಪ್ರಭುರವರು ಶಾಲೆಗೆ ಭೇಟಿ ನೀಡಿ ಶಾಲೆಯ ಅಭಿವೃದ್ಧಿಯ ಬಗ್ಗೆ ಮೆಚ್ಚುಗೆ ಸೂಚಿಸಿದ್ದಾರೆ.

ಮಲೆನಾಡಿನ ಪುಟ್ಟ ಹಳ್ಳಿಯಾದರೂ,ತಾಲ್ಲೂಕು ಕೇಂದ್ರಕ್ಕೆ ಕೇವಲ 4 ಕಿ.ಮೀ ದೂರದಲ್ಲಿರುವ ನಮ್ಮ ಶಾಲೆ ಪಟ್ಟಣದ ಯಾವುದೇ ಆಂಗ್ಲ ಮಾಧ್ಯಮ ಶಾಲೆ ಹಾಗೂ ಖಾಸಗಿ ಶಾಲೆಗಳಿಗೆ ಕಡಿಮೆ ಇಲ್ಲದಂತೆ ಸಾಗುತ್ತಿದೆ.ಕನ್ನಡ ಮಾಧ್ಯಮ ಶಾಲೆಯಾದರೂ ಆಂಗ್ಲ ಭಾಷಾ ಕಲಿಕೆಗೆ ವಿಶೇಷ ಅವಕಾಶ ನೀಡಲಾಗುತ್ತಿದೆ.ಪಠ್ಯ ಮತ್ತು ಸಹಪಠ್ಯ ಚಟುವಟಿಕೆಗಳ ಸಾಧನೆಗಳು ಶಾಲೆಯತ್ತ ಸಮುದಾಯವನ್ನು ಸೆಳೆಯುತ್ತಿವೆ.ಜನವರಿ 21,2024 ರಲ್ಲಿ ನಡೆದ ಶಾಲಾ ಬೆಳ್ಳಿ ಹಬ್ಬದ ಕಾರ್ಯಕ್ರಮವನ್ನು ಇಡೀ ಊರಿನ ಜನರ ಸಹಕಾರದೊಂದಿಗೆ ಅದ್ದೂರಿಯಾಗಿ ಆಚರಿಸಿ ಶಾಲೆಯ ಇಪ್ಪತ್ತೈದು ವರ್ಷಗಳ ಸಾರ್ಥಕ ಪಯಣವನ್ನು ಸಾಕ್ಷೀಕರಿಸಲಾಗಿದೆ.ಪ್ರಸ್ತುತ 2024-25 ನೇ ಸಾಲಿನಲ್ಲಿ 29 ಮಕ್ಕಳು ವ್ಯಾಸಾಂಗ ಮಾಡುತ್ತಿದ್ದು ಈ ಭಾಗದ ಇತರ ಶಾಲೆಗಳಿಗೆ ಹೋಲಿಸಿದರೆ ಇದು ಉತ್ತಮ ದಾಖಲಾತಿ ಆಗಿದೆ.ಮುಖ್ಯ ಶಿಕ್ಷಕಿ ಭಾರತಿ ಎ ಮತ್ತು ಸಹ ಶಿಕ್ಷಕಿ ಆಶಾಲತಾ ಬಿ ಯವರು ಮಕ್ಕಳ ಶೈಕ್ಷಣಿಕ ಉನ್ನತಿಗೆ ಸದಾ ಹೊಸ ಚಿಂತನೆಗಳನ್ನು ಮಾಡುವ ಕ್ರಿಯಾಶೀಲ ಶಿಕ್ಷರಾಗಿದ್ದಾರೆ.ಮಲೆನಾಡಿನ ಭಾಗದಲ್ಲಿ "ಸಣ್ಣಕೆರೆ ಚಿಣ್ಣರ ಎಕ್ಸ್‌ಪ್ರೆಸ್" ಎಂದೇ ಖ್ಯಾತಿ ಪಡೆದ ನಮ್ಮ ಶಾಲೆ ಭೌತಿಕವಾಗಿ ಮತ್ತು ಬೌದ್ಧಿಕವಾಗಿ ಧನಾತ್ಮಕ ಸಾಧನೆ ಮಾಡುತ್ತಿದೆ ಎಂಬುದರಲ್ಲಿ ಎರಡು ಮಾತಿಲ್ಲ.ಸರ್ಕಾರಿ ಶಾಲೆಗಳ ಉಳಿವಿನಲ್ಲಿ ಸಮುದಾಯದ ಸಹಕಾರದಿಂದ ಮುನ್ನಡೆಯುವ ನಮ್ಮ ಕನಸಿನ ಶಾಲೆ ಸದಾ ಹೊಸತನವನ್ನು ಅಳವಡಿಸಿಕೊಳ್ಳುವಲ್ಲಿ ಉತ್ಸುಕವಾಗಿದೆ.

**ಧನ್ಯವಾದಗಳು**